

ಈ ಜೋಡುಗಳು ಹೇಳುತ್ತಿರುವ ಕಥೆ ಯಾವುದು?



ಕಲ್ಲು–ಕುಳ್ಳು



ವೀರೇಶ ರುದ್ರಸ್ವಾಮಿ

ಇಟ್ಟು ರಾಶಿ ಒಟ್ಟಿದಂತಿದೆ! ಇದೇ ಬೆರಣಿಗಳನ್ನು ಇನ್ನೊಂದೆಡೆ ಸರಳರೇಖೆಯಂತೆ ಸಾಲಾಗಿ ತಟ್ಟಿ ಇಡಲಾಗಿದೆ. ಅದೂ ದನ ಕಟ್ಟುವ ಒಂದು ಉದ್ದನೆಯ ಕಟ್ಟೆಯ ಮೇಲೆ! ಅಲ್ಲಿ ಕಟ್ಟಿರುವ ದನದ ಮುಂದೆ ಮೇವಿಲ್ಲ. ಬೆರಣಿಯ ಸಾಲಿದೆ. ಆ ದನ ಯಾವುದನ್ನು ತಿನ್ನಬೇಕು?

ಚಂದಾಲಿಂಗೇಶ್ವರ ಗುಡ್ಡದಲ್ಲಿ ಕಂಡುಬಂದ ಯೋನಿಯ ರೂಪವನ್ನು ಹೋಲುವ ಶಿಲಾಕೃತಿ, ಅದರ ತುದಿಯಲ್ಲಿ ಅಂಟಿರುವ ಮುಳ್ಳು. ಇವುಗಳನ್ನೆಲ್ಲ ನೋಡಿದರೆ ಸಹೃದಯರ ಮನಸ್ಸಿನಲ್ಲಿ ಅನೇಕ ಅರ್ಥಗಳು ಹೊಳೆಯುತ್ತವೆ. ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಆಕ್ರಮಣ, ಕ್ರೌರ್ಯ ಕಣ್ಣ ಮುಂದೆ ಬರುತ್ತದೆ. ಹೆಣ್ಣಿನ ಮೇಲೆ ನಡೆಯುವ ಬಹುತೇಕ ದೌರ್ಜನ್ಯಗಳು ಆಕೆಯ ಈ ಅಂಗದ ಕಾರಣಕ್ಕಾಗಿಯೇ ನಡೆದಿವೆ. ಅದಕ್ಕಾಗಿಯೇ 'ಈ ಅಂಗವೊಂದು ಇರದಿದ್ದರೆ...' ಎನ್ನುವ ಕಾವ್ಯದ ಸಾಲುಗಳು ಮೂಡಿಬಂದದ್ದು. ಮನುಷ್ಯನ ಫಲವಂತಿಕೆಯ ಸ್ಥಾನವಾದ ಈ ಅಂಗ ಕೇವಲ ಚಪಲದ ಮೂಲವಾಗಿರುವುದಕ್ಕೆ ಆ ಅಂಗವೇ ಇಲ್ಲಿ ಶಿಲೆಯಾಗಿಬಿಟ್ಟಿದೆಯೇ? ಅನ್ನುವ ಜಿಜ್ಞಾಸೆ ಸಹೃದಯರಲ್ಲಿ ಮೂಡದೆ ಇರದು.

ನಾವು ಚಪ್ಪಲಿಯ ಅಂಗಡಿಗೆ ಹೋಗುವುದು ಚಪ್ಪಲಿ ಕೊಳ್ಳಬೇಕೆಂದು, ಕೇವಲ ನೋಡಬೇಕೆಂದು ಚಪ್ಪಲಿ ಅಂಗಡಿಗೆ ಹೋಗಲಾರೆವು. ಇಲ್ಲಿ ಚಪ್ಪಲಿಗಳ ಪಟವಿದೆ. ಇವುಗಳನ್ನು ನೋಡುವುದಕ್ಕೆ ಮಾತ್ರ ಸಾಧ್ಯ. ದೇಸಿ ಮಾದರಿಯ ಚಪ್ಪಲಿಗಳನ್ನು ಸಾಲಾಗಿ, ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಈ ಚಪ್ಪಲಿಗಳನ್ನು ಕೈಗೆ ತೆಗೆದುಕೊಳ್ಳುವ ಬೇರೆ ಬೇರೆ ಸಂದರ್ಭಗಳನ್ನು ನೀವೇ ಊಹಿಸಿಕೊಳ್ಳಿ! ನಾನು ಹೇಳಿ ಅದರ ಸ್ವಾರಸ್ಯ ಹಾಳು ಮಾಡಲಾರೆ. ಎಷ್ಟೆಲ್ಲಾ.. ವಿಚಿತ್ರಗಳಿವೆಯಲ್ಲವೇ?

ಇನ್ನು ಹೊಳೆ ಬದಿಯ ಗುಡ್ಡ, ಆ ಗುಡ್ಡದ ತುಂಬ ಸಾಲು ಸಾಲಾಗಿ ನೆಟ್ಟಿರುವ ರೈತರ ಪಂಪ್‌ಸೆಟ್ಟಿನ ಸ್ಟಾರ್ಟರ್‌ಗಳ ಗೂಡು ಪೆಟ್ಟಿಗೆಗಳಿವೆ. ಇವು ಒಂದು ರೀತಿಯ ಫಲಕಗಳಂತೆ ಕಾಣುತ್ತವೆ. ಈ ಫಲಕಗಳು ರೈತರ ಹಣೇಬರಹ ಬರೆಯುವ, ಬರೆದಿರುವ ಫಲಕಗಳಂತೆ ಕಾಣುತ್ತವೆ. 'ಇನ್‌ಸ್ಟಾಲೇಶನ್ ಮಾಡಬಯಸುವ ಕಲಾವಿದರಿಗೆ ಪರಿಸರದ ಈ ಸ್ವಾಭಾವಿಕ ಇನ್‌ಸ್ಟಾಲೇಶನ್‌ಗಳು ಬಹುದೊಡ್ಡ ಮಾದರಿಗಳಾಗಿವೆ' ಎಂದು ವೀರೇಶ ನುಡಿಯುತ್ತಾರೆ.

ವೀರೇಶರ ಕಲಾವಿದನ ಕಣ್ಣು ಪ್ರಕೃತಿಯಲ್ಲಿ ಕಂಡಿರುವ ಆಕೃತಿಗಳನ್ನು ನೋಡಿದರೆ, ಕಲಾಕೃತಿಗಳೆಲ್ಲವೂ ಕಲಾವಿದರಿಂದಲೇ ಹುಟ್ಟುತ್ತವೆ ಎಂದೇನಿಲ್ಲ ಅನ್ನಿಸುತ್ತದೆ. ಮನುಷ್ಯ ಬದುಕಿನ ಪರಿಸರದಲ್ಲಿ ಮತ್ತು ಪ್ರಕೃತಿಯಲ್ಲಿ ಸಹಜ ಕಲಾಕೃತಿಗಳು ಸಾಕಷ್ಟು ಇರುತ್ತವೆ. ಅವುಗಳನ್ನು ನೋಡುವುದಕ್ಕೆ ಮಾತ್ರ ಕಲಾವಿದನ 'ಕಣ್ಣು' ಇರಬೇಕಾಗುತ್ತದೆ. ಆ ಕಣ್ಣು ವೀರೇಶ ರುದ್ರಸ್ವಾಮಿಯವರಲ್ಲಿ ತುಂಬಾ ತೀಕ್ಷ್ಣವಾಗಿದೆ ಎಂಬುದಕ್ಕೆ ಇಲ್ಲಿನ ಚಿತ್ರಗಳು ಸಾಕ್ಷಿಯಾಗಿವೆ.

ಸೈಟ್ ಸ್ಪೆಸಿಫಿಕ್ ಆರ್ಟ್, ಅರ್ಥ್ ಆರ್ಟ್... ಹೀಗೆ ಹೊಸ ಮಾಧ್ಯಮಗಳು ಸೃಷ್ಟಿಯಾಗುತ್ತಲಿರುವಾಗ ವೀರೇಶ್ ಕೂಡಾ ಒಂದು ಹೊಸ ಮಾಧ್ಯಮಕ್ಕೆ ಮುಂಗಾಣ್ಕೆಯನ್ನು ನೀಡಿದ್ದಾರೆ ಅನ್ನಬಹುದು. ಇದನ್ನು **Atmosphere Art** ಎನ್ನಬಹುದೇನೋ?

ಪ್ರತಿಕ್ರಿಯಿಸಿ: **feedback@sudha.co.in**